## ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು

**ಸಿ.ಸಿ.ನಂಃ 701 / 2019**

ದಿನಾಂಕಃ **12 /07 /2022**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು

ವಿರುದ್ಧ

ಆರೋಪಿಗಳು :- ಉಮೇಶ ಬಿನ್ ದ್ಯಾವಯ್ಯ ಮತ್ತು ಇನ್ನೊಬ್ಬರು

**:: ದೋಷಾರೋಪಣೆ ::**

ಶ್ರೀ.ಪ್ರೀತಿ ಎಲ್ ಮಳವಳ್ಳಿ ಬಿ.ಬಿ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

ಆರೋಪಿತರು : 1. ಉಮೇಶ ಬಿನ್ ದ್ಯಾವಯ್ಯ,
42 ವರ್ಷ,
ಯಗಟಿ ಗ್ರಾಮ,
ಅರಕಲಗೂಡು ತಾಲ್ಲೂಕು

2. ಮಂಗಳ ಕೋಂ ಉಮೇಶ
32 ವರ್ಷ,
ಯಗಟಿ ಗ್ರಾಮ,
ಅರಕಲಗೂಡು ತಾಲ್ಲೂಕು

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

ದಿನಾಂಕಃ 15/04/2019 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ಸರಹದ್ದಿನ ಸೋಮನಹಳ್ಳಿ ಕಾಲೋನಿಯಲ್ಲಿ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಏಕ್ಕೋದ್ದೇಶದಿಂದ ಸಾಕ್ಷಿ-2 ರಿಂದ 4 ರವರ ಮನೆಯವರಿಗೂ ಆರೋಪಿತರ ಮನೆಯವರಿಗೂ ಜಮೀನು ವಿವಾದವಿದ್ದು, ಸಾಕ್ಷಿ-2 ಶಿವರಾಜ ರವರ ಜಮೀನಿನಲ್ಲಿದ್ದ ಆಲದ ಮರಗಳನ್ನು ಕಡಿದ ವಿಚಾರದಲ್ಲಿ ಸಾಕ್ಷಿ-2 ಶಿವರಾಜರವರು 1 ನೇ ಆರೋಪಿಯಾದ ಉಮೇಶ ಬಿನ್ ದ್ಯಾವಯ್ಯ ಆದ ನಿಮಗೆ ಕೇಳಿದ್ದಕ್ಕೆ ಸೂಳೆಮಗನೆ ನೀನು ಯಾರು ನನ್ನ ಕೇಳೋಕೆ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ504 ಸಹವಾಚಕ ಕಲಂಃ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಏಕ್ಕೋದ್ದೇಶದಿಂದ ಸಾಕ್ಷಿ–2 ಶಿವರಾಜುರವರಿಗೆ 1 ನೇ ಆರೋಪಿಯಾದ ಉಮೇಶ ಬಿನ್ ದ್ಯಾವಯ್ಯ ಆದ ನೀವು ಕಬ್ಬಿಣದ ರಾಡಿನಿಂದ ಎಡಮೊಣಕೈಗೆ ಮತ್ತು ಎಡಮುಂಗೈಗೆ ಹೊಡೆದು, ಜಗಳ ಬಿಡಿಸಲು ಹೋದ ಸಾಕ್ಷಿ–3 ರಾಜಯ್ಯ ಬಿನ್ ಕಾಳಯ್ಯ ರವರಿಗೆ ಅದೇ ರಾಡಿನಿಂದ ಎಡರುಂಡಿಗೆ ಮತ್ತು ಮೈ–ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ324 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಏಕ್ಕೋದ್ದೇಶದಿಂದ ಜಗಳ ಬಿಡಿಸಲು ಹೋದ ಸಾಕ್ಷಿ–4 ತಾಯಮ್ಮ ಕೋಂ ರಾಜಯ್ಯರವರಿಗೆ 1 ನೇ ಆರೋಪಿ ಉಮೇಶ ಬಿನ್ ದ್ಯಾವಯ್ಯ ಆದ ನೀವು ಮಚ್ಚಿನಿಂದ ತಲೆಗೆ ಹೊಡೆದು, 2 ನೇ ಆರೋಪಿ ಮಂಗಳ ಕೋಂ ಉಮೇಶ ಆದ ನೀವು ಇಟ್ಟಿಗೆ ತುಂಡಿನಿಂದ ಸಾಕ್ಷಿ–4 ತಾಯಮ್ಮ ಕೋಂ ರಾಜಯ್ಯರವರ ಎಡಗಾಲು , ಮಂಡಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ326 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಏಕ್ಕೋದ್ದೇಶದಿಂದ 2 ನೇ ಆರೋಪಿ ಮಂಗಳ ಕೋಂ ಉಮೇಶ ಆದ ನೀವು ಸಾಕ್ಷಿ–4 ತಾಯಮ್ಮ ಕೋಂ ರಾಜಯ್ಯರವರಿಗೆ ಕೈಯಿಂದ ಮೈ–ಕೈಗೆ ಹೊಡೆದಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ323 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಏಕ್ಕೋದ್ದೇಶದಿಂದ 1 ನೇ ಆರೋಪಿ ಉಮೇಶ ಬಿನ್ ದ್ಯಾವಯ್ಯ ಆದ ನೀವು ಸಾಕ್ಷಿ–4 ತಾಯಮ್ಮ ಕೋಂ ರಾಜಯ್ಯರವರಿಗೆ ಕೈಯಿಂದ ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟಾಗುವಂತೆ ಮಾಡಿರುತ್ತೀರಿ . ಆದ್ದರಿಂದ ಭಾ.ದಂ.ಸಂ.ಕಲಂಃ354 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಗಳಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ ಆರೋಪಿಗಳಾದ ನೀವುಗಳು ಸಾಕ್ಷಿ–2 ರಿಂದ 4 ರವರಿಗೆ ಕೊಲೆ ಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ506 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

C/c ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಅರಕಲಗೂಡು